# ಭೀತಿಯ ಬೆಂಗಳೂರು ಭರವಸೆ ತುಂಬಿದೆ

**ರಕ್ಷಾ ಉದಯದ 'ಪ್ರೀತಿಯ ಅರಸಿ'ಯ ಅಂಜಲಿ**



◆ ನಟನೆಯನ್ನು ವೃತ್ತಿಪರ ಮಾಡಿಕೊಳ್ಳಲು ಪ್ರೇರಣೆ ಏನು?

ನನ್ನ ಅಭಿನಯದ ಆಸೆಗೆ ಪ್ರೇರಣೆ ಆದವರು ನನ್ನ ತಾಯಿ. ಅವರೂ ನಟಿಯಾಗಿದ್ದರು. ಯಶವಂತ್ ಸರ್ದೇಶಪಾಂಡೆ ಅವರ ತಂಡದಲ್ಲಿ ಅನೇಕ ನಾಟಕಗಳನ್ನು ಆಡಿದ್ದಾರೆ. ಅವರೇ ನನಗೆ ಆದರ್ಶವೂ ಹೌದು. ಅವರಿಂದಾಗಿ ನಟಿ ಆಗಬೇಕು ಎಂದು ಕನಸು ಕಟ್ಟಿಕೊಂಡೆ. ನಂತರ ಒಂದು ಮಾಡೆಲಿಂಗ್ ಸಂಸ್ಥೆಯಲ್ಲಿ ಕೆಲಸ ಆರಂಭಿಸಿದೆ. ಆಗ 'ಮಿಸ್ ಮೈಸೂರು' ಪುರಸ್ಕಾರ ಸಿಕ್ಕಿತು. ಆ ಸ್ಪರ್ಧೆಯಲ್ಲಿ ಸಿನಿಮಾರಂಗದವರೇ ತೀರ್ಪುಗಾರರಾಗಿ ಆಗಮಿಸಿದ್ದವರು. ಅಲ್ಲಿಂದ ಸೀರಿಯಲ್, ಸಿನಿಮಾ ಸಂಪರ್ಕಗಳು ಸಿಕ್ಕವು. ಆಡಿಷನ್ ನೀಡಲು ಆರಂಭಿಸಿದೆ. ಅದರಿಂದ ಈ ಧಾರಾವಾಹಿಯಲ್ಲಿ ಅವಕಾಶ ಸಿಕ್ಕಿತು.

◆ ಬೆಂಗಳೂರು ನಿಮ್ಮದಾಗುವ ಮುಂಚೆ ಹೇಗೆನಿಸುತ್ತಿತ್ತು?

ನಮ್ಮೂರು ಹುಬ್ಬಳ್ಳಿ. ಬೆಂಗಳೂರಿಗಳಾಗಿ ಕೇವಲ ಒಂದು ವರ್ಷ ಆಗಿದೆ. ಆಡಿಷನ್ನಿಗೆ ಅಂತ ಬೆಂಗಳೂರಿಗೆ ಬರುತ್ತಿದ್ದೆ. ಆಗೆಲ್ಲ ನನಗೆ ಭಯ ಕಾಡುತ್ತಿತ್ತು. ಇಲ್ಲಿ ನನಗೆ ಯಾರೂ ಪರಿಚಯ ಇರಲಿಲ್ಲ. ಈ ಕ್ಷೇತ್ರವೂ ಹೊಸದು. ಹಾಗಾಗಿ ಅಳುಕಿನಲ್ಲಿಯೇ ನನ್ನ ಪ್ರಯತ್ನವನ್ನು ಮಾಡುತ್ತಿದ್ದೆ. ಬಸ್ ಇಳಿದ ನಂತರ ಆಡಿಷನ್ ಸ್ಥಳಕ್ಕೆ ಹೇಗೆ ಹೋಗಬೇಕು ಎನ್ನುವುದೇ ಗೊತ್ತಿರಲಿಲ್ಲ. ಅಷ್ಟೇ ಏಕೆ, ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಎನ್ನುವುದೂ ಗೊತ್ತಿರಲಿಲ್ಲ. ರಾತ್ರಿ ಅಲ್ಲಿಂದ ಬರ್ತಿದ್ದೆ. ಆಡಿಷನ್ ಕೊಟ್ಟು ಮತ್ತೆ ಹುಬ್ಬಳ್ಳಿಗೆ ಹೋಗುತ್ತಿದ್ದೆ. ಆಗ ಇನ್ನೂ ಬಿಕಾಂ ಓದುತ್ತಿದ್ದೆ. ಬೆಂಗಳೂರು ಸುರಕ್ಷಿತ ಅಲ್ಲ ಎಂದೇ ಆಗ ಅನ್ನಿಸುತ್ತಿತ್ತು. ಇಲ್ಲಿ ನಾನು ಹೊಂದಿಕೊಳ್ಳುತ್ತೇನಾ ಎನ್ನುವ ಪ್ರಶ್ನೆಗಳು ಎದುರಾಗಿದ್ದವು. ಮಾತ್ರವಲ್ಲ, ಕೆಲವೊಮ್ಮೆ ಆಡಿಷನ್ ಮುಗಿಸಿ ಹೋಗಿ ಪರೀಕ್ಷೆಯನ್ನು ಬರೆದಿದ್ದು ಇದೆ. ಅಂತಹ ಸಂದರ್ಭದಲ್ಲಿ ಒತ್ತಡ ಹೆಚ್ಚಾಗುತ್ತಿತ್ತು. ಈಗ ಬೆಂಗಳೂರು ಬೊಗಸೆಯಲ್ಲಿ ಭರವಸೆಯನ್ನು ತುಂಬಿದೆ.

◆ ಕ್ಯಾಮೆರಾ ಎದುರು ಮೊದಲು ಡೈಲಾಗ್ ಹೇಳಿದ ಸಂದರ್ಭ ಹೇಗಿತ್ತು?

ತುಂಬ ಕುತೂಹಲ ಇತ್ತು. ಹಾಗೆಯೇ ಭಯ ಕೂಡ ಕಾಡುತ್ತಿತ್ತು. ಇದೇ ನನ್ನ ಮೊದಲ ಧಾರಾವಾಹಿ. ಸವಾಲನ್ನು ಎದುರಿಸುತ್ತಿದ್ದೇನೆ. ನನ್ನ ಆಸೆಯ ರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದೇನೆ ಎನ್ನುವ ಖುಷಿ ಸಿಕ್ಕಿದೆ. ಕ್ಯಾಮೆರಾವನ್ನು ಯಾವ ಪೊಸಿಷನ್‌ನಲ್ಲಿ ಎದುರಿಸಬೇಕು, ಆ್ಯಕ್ಷನ್ ಹೇಗೆ ಮಾಡಬೇಕು ಎನ್ನುವುದು ಸ್ವಲ್ಪವೂ ಗೊತ್ತಿರಲಿಲ್ಲ. ನಟನೆ ಎಷ್ಟು ಮಾಡಬೇಕು ಎನ್ನುವ ಬಗ್ಗೆಯೂ ಅರಿವು ಇರಲಿಲ್ಲ. ಅದೆಲ್ಲ ಹೇಳಿಕೊಟ್ಟು ಮಾಡಿಸುವುದು ಅಲ್ಲ. ಜೂಮ್ ಮಾಡಿದಾಗ ಫ್ರೇಮ್ ಮಿತಿಯಲ್ಲೇ ಮಾಡಬೇಕು. ಆಗ ಅದು ನನಗೆ ಕಲಿಕೆ ಎಂದು ಅನ್ನಿಸಿತು. ಅನುಭವದಿಂದಲೇ ಅದನ್ನು ರೂಢಿಸಿಕೊಳ್ಳುತ್ತಿದ್ದೇನೆ. ನನ್ನ ಈ ಕೆಲಸಕ್ಕೆ ಪೋಷಕರು ಮತ್ತು ಸ್ನೇಹಿತರಿಂದ ಮೆಚ್ಚುಗೆ ಸಿಕ್ಕಿದೆ. ಮುಂದಿನ ದಿನಗಳಲ್ಲಿ ಜನ ಹೇಗೆ ಸ್ವೀಕರಿಸುತ್ತಾರೆ ಎಂದು ಕಾದುನೋಡುತ್ತಿದ್ದೇನೆ. ಸ್ನೇಹಿತರು ಕಾಲು ಎಳೆಯುವುದೇ ಹೆಚ್ಚು. ತಮಗೂ ಅವಕಾಶ ಕೊಡಿಸು ಎಂದು ಕೆಲವರು ಕೇಳಿದ್ದಾರೆ. ಇನ್ನೂ ಕೆಲವರು ದೊಡ್ಡಮಟ್ಟಕ್ಕೆ ಬೆಳೆಯಬೇಕು ಎಂದು ಆಶಿಸಿದ್ದಾರೆ.

◆ ನಟನೆಯ ಕ್ಷೇತ್ರ ಹೊಸತು. ಇಂತಹ ಅನಿಶ್ಚಿತ ರಂಗದ ಸವಾಲು ಎದುರಿಸುವ ಧೈರ್ಯ ಹೇಗೆ ಬಂತು?

ನಮ್ಮ ಪೋಷಕರು ತುಂಬ ಪ್ರೋತ್ಸಾಹವನ್ನು ನೀಡಿದ್ದಾರೆ. ಎಲ್ಲೇ ಆಡಿಷನ್ ನೀಡಲು ಹೋದರೂ ನನ್ನ ಜೊತೆ ಬರುತ್ತಿದ್ದರು. ಅಮ್ಮ ನಟಿ ಆಗಿದ್ದರಿಂದ ಅವರ ಅನುಭವ ನನಗೆ ಮಾರ್ಗದರ್ಶನ ಆಗುತ್ತಿತ್ತು. ಚಿಕ್ಕವಯಸ್ಸಿನಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವ ಅವಕಾಶ ಸಿಕ್ಕಿದೆ. ಈ ಕ್ಷೇತ್ರದಲ್ಲಿ ಅವಕಾಶ ಸೀಮಿತವಾಗಿರುತ್ತದೆ. ಅದರಲ್ಲೇ ನಮ್ಮ ಕೌಶಲ್ಯ ಮತ್ತು ಪ್ರತಿಭೆಯನ್ನು ಸಾಧಿಸಿ ತೋರಿಸಬೇಕಿದೆ. ನನ್ನ ಆತ್ಮವಿಶ್ವಾಸ ಮತ್ತು ನಮ್ಮ ಮನೆಯರ ಬೆಂಬಲ ಧೈರ್ಯವನ್ನು ತುಂಬಿದೆ.

◆ ಮುಂದಿನ ನಿಮ್ಮ ಕನಸಿನ ಬಗ್ಗೆ ಹೇಳಿ.

ಇದೇ ಕ್ಷೇತ್ರದಲ್ಲಿ ಬೆಳೆಯಬೇಕು. ಒಳ್ಳೆಯ ಕಂಟೆಂಟ್ ಇರುವ ಪಾತ್ರಗಳನ್ನು ನಿರ್ವಹಿಸಬೇಕು. ಬೇರೆ ಬೇರೆ ಭಾಷೆಗಳಲ್ಲಿಯೂ ನಟಿಸಬೇಕು. ಸ್ತ್ರೀ ಪ್ರಧಾನ ಕಥೆಗಳನ್ನು ನಿರ್ವಹಿಸಬೇಕು. ಆ ಮೂಲಕ ಸಮಸಮಾಜದ ಮೌಲ್ಯವನ್ನು ಬಿಂಬಿಸಬೇಕು. ಅಂತಹ ಕಥೆಗಳು ನನಗೆ ಇಷ್ಟ. ಈ ಪಾತ್ರವೂ ಹಾಗೆಯೇ ಇದೆ. ಮೊದಲ ಪ್ರಯತ್ನದಲ್ಲಿಯೇ ಯಶಸ್ವಿಯಾಗಿದೆ. ಕಲಾವಿದೆಯಾಗಿ ಮಾದರಿ ಪಾತ್ರಗಳನ್ನು ಮಾಡಬೇಕು ಎಂದೇ ಭಾವಿಸಿದ್ದೇನೆ.

■ ರಾಘವೇಂದ್ರ ಕೆ.